ಶುಕ್ರವಾರ, ಫೆಬ್ರುವರಿ 24, 2017 | ಮಂಗಳೂರು | ₹ 5.00 | ಪುಟ 30 + 2 | ಸಂಪುಟ 20 | ಸಂಚಿಕೆ 55

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Sahyadri College of Engineering & Management CENTRAL LIBRARY

**ಸಹ್ಯಾದ್ರಿ ಕಾಲೇಜು**

# ಇಂದು ರಾಷ್ಟ್ರೀಯ ಕಾರ್ಯಾಗಾರ

ಮಂಗಳೂರು: ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಪ್ ಪೀಪಲ್ ಮ್ಯಾನೇಜ್‌ಮೆಂಟ್ ಮಂಗಳೂರು ಘಟಕದ ವತಿಯಿಂದ ಇದೇ 24ರಂದು ಬೆಳಿಗ್ಗೆ 9ಕ್ಕೆ 'ಲಿವರೇಜ್ ಬಿಸಿನೆಸ್ ಸ್ಕಿಲ್ಸ್ ಇನ್ ಲೈನ್ ವಿದ್ ಕರೆಂಟ್ ಎಚ್‌ಆರ್ ಟ್ರೆಂಡ್ಸ್ ಅಂಡ್ ಎಂಪ್ಲಾಯಿ ಲಾ' ಎಂಬ ವಿಷಯದ ಕುರಿತು ಒಂದು ದಿನದ ವಿಶೇಷ ರಾಷ್ಟ್ರೀಯ ಕಾರ್ಯಾಗಾರ ಅಡ್ಯಾರ್ ಸಹ್ಯಾದ್ರಿ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ ಎಂದು ಎನ್‌ಐಪಿಎಂ ಅಧ್ಯಕ್ಷ ಪಿ. ಸುರೇಶ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಕಾರ್ಯಾಗಾರದಲ್ಲಿ ವ್ಯವಹಾರದ ಕೌಶಲ, ಪ್ರಸ್ತುತ ಎಚ್‌ಆರ್ ಪ್ರವೃತ್ತಿ, ಉದ್ಯೋಗ ಕಾನೂನು ಮತ್ತು ಸಲಹೆಗಳ ಕುರಿತು ಮಾಹಿತಿ ನೀಡಲಾಗುವುದು. ಎಂಸಿಎಫ್ ಲಿಮಿಟೆಡ್‌ನ ನಿರ್ದೇಶಕ ಕೆ. ಪ್ರಭಾಕರ್ ರಾವ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ಎಲ್‌ಎಲ್‌ಪಿ ಇದರ ವ್ಯವಹಾರಿಕ ಪಾಲುದಾರ ಶೈಲೇಂದ್ರ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಹೇಳಿದರು.

ಸಂಜೆ 4.30ಕ್ಕೆ ಕಾರ್ಯಾಗಾರದ ಸಮಾರೋಪ ಸಮಾರಂಭ ನಡೆಯಲಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಸಹ್ಯಾದ್ರಿ ಕಾಲೇಜಿನ ವಿಶಾಲ್ ಸಮರ್ಥ, ಎನ್‌ಐಪಿಎಂನ ದೇವರಾಜ್ ಮತ್ತಿತರರು ಇದ್ದರು.

~ಮುಂಜಾನೆ ಮಾತು ~
ಇನ್ನೊಬ್ಬರಿಗೆ ತೊಂದರೆಯಾಗದಂತೆ ನಮ್ಮ ನಮ್ಮ ಆಚರಣೆಗಳು ಇದ್ದಾಗ ಜಗತ್ತಿನಲ್ಲಿ ಶಾಂತಿಯ ಹೊರತಾಗಿ ಇನ್ನೇನೂ ಇರಲು ಸಾಧ್ಯವಿಲ್ಲ.

ವಿಜಯವಾಣಿ
ಕನ್ನಡಿಗರ ಧ್ವನಿ
ನಂ. 1★ ಕನ್ನಡ ದಿನಪತ್ರಿಕೆ

Sahyadri College of Engineering & Management, Adyar, Mangalore - 7
CENTRAL LIBRARY



ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ VIJAYAVANI ● MANGALURU ಮಂಗಳೂರು ● ಸಂಪುಟ 5 ● ಸಂಚಿಕೆ 326 ಪುಟ
vijayavani.net ಇ-ಪೇಪರ್: epapervijayavani.in VVani4U @VVANI4U vijayavaninews@gmail.com ಸಹಾಯವಾಣಿ: 8884411682 24 ಫೆಬ್ರವರಿ 2017 | ಶುಕ್ರವಾರ 24 FEBRUA

# ಇಂದು ಸಹ್ಯಾದ್ರಿ ಕಾಲೇಜಿನಲ್ಲಿ ವಿಚಾರ ಸಂಕಿರಣ

**ಮಂಗಳೂರು:** ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಪೀಪಲ್ ಮ್ಯಾನೇಜ್‌ಮೆಂಟ್, ಅಡ್ಯಾರ್ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜು ಸಹಯೋಗದಲ್ಲಿ 'ಲಿವರೇಜಿಂಗ್ ಬ್ಯುಸಿನೆಸ್ ಸ್ಕಿಲ್ಸ್ ಇನ್ ಲೈನ್ ವಿದ್ ಕರೆಂಟ್ ಎಚ್‌ಆರ್ ಟ್ರೆಂಡ್ಸ್ ಆ್ಯಂಡ್ ಎಂಪ್ಲಾಯಿ ಲ್ಯಾಸ್' ವಿಷಯದ ಕುರಿತು ವಿಚಾರ ಸಂಕಿರಣ ಫೆ.24ರಂದು ಕಾಲೇಜು ಸಭಾಂಗಣದಲ್ಲಿ ನಡೆಯಲಿದೆ.

ಕಾರ್ಯಾಗಾರವನ್ನು ಎಂಸಿಎಫ್ ನಿರ್ದೇಶಕ ಕೆ.ಪ್ರಭಾಕರ್ ರಾವ್ ಉದ್ಘಾಟಿಸಲಿದ್ದು, ಕಾರ್ಡೋಲೈಟ್ ಸ್ಪೆಷಾಲಿಟಿ ಕೆಮಿಕಲ್ಸ್‌ನ ಆಡಳಿತ ಪಾಲುದಾರ ಶೈಲೇಂದ್ರ ಭಟ್ಕಂಡೆ, ಭಂಡಾರಿ ಫೌಂಡೇಶನ್ ಚೇರ್ಮನ್ ಡಾ.ಮಂಜುನಾಥ ಭಂಡಾರಿ ಭಾಗವಹಿಸಲಿದ್ದಾರೆ ಎಂದು ಎನ್‌ಐಪಿಎಂ ಅಧ್ಯಕ್ಷ ಸುರೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಸಮಾರೋಪದಲ್ಲಿ ನಿಟ್ಟೆ ವಿವಿಯ ರಿಜಿಸ್ಟ್ರಾರ್ ಡಾ.ಎಂ.ಎಸ್.ಮೂಡಿತ್ತಾಯ, ಪ್ರಾಂಶುಪಾಲ ಡಾ.ಉಮೇಶ್ ಎಂ.ಭೂಷಿ ಭಾಗವಹಿಸುವರು. ಚಾರ್ಲ್ಸ್ ಕರ್ವಾಲೊ, ಎನ್. ಪ್ರಸಾದ್ ಮೆನನ್, ನಿವೇದಿತಾ ಮಿರ್ಜಾಕರ್, ಸಿ.ಎಂ.ನಟರಾಜ್, ಪಿ.ಜಿ. ರೈ, ಹರಿಪ್ರಸಾದ್, ಸುರೇಂದ್ರನಾಥ್ ಸಂಪನ್ಮೂಲ ವ್ಯಕ್ತಿಗಳಾಗಿರುವವರು ಎಂದರು. ಡಾ.ವಿಶಾಲ್ ಸಮರ್ಥ, ಡಾ.ದೇವರಾಜ್ ಕೆ, ಶೇಖರ್ ಪೂಜಾರಿ ಉಪಸ್ಥಿತರಿದ್ದರು.